ದಿನಾಂಕ 15/10/2025 ರಂದು ಸಾಕ್ಷೀಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು</u> **:** 4 ನೇ ಎದುರುದಾರರ ಪರ ಶ್ರೀ ಪಿ.ವಿ.ಎಂ. ವಕೀಲರು :

3. ನಾನು 2 ನೇ ತರಗತಿಯವರೆಗೆ ಓದಿದ್ದೇನೆ. ಘಟನೆಯ ದಿನ ಮೋಟಾರ ಸೈಕಲನ್ನು ನಾನೇ ಓಡಿಸುತ್ತಿದ್ದೇ ಎಂದರೆ ಸರಿಯಲ್ಲ. ನನ್ನ ಹತ್ತಿರ ವಾಹನ ಚಾಲನ ಪರವಾನಿಗೆ ಇಲ್ಲ.

4. ಅಪಘಾತದ ನಂತರ ವಾಸು ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ 6 ದಿನ ಒಳರೋಗಿಯಾಗಿದ್ದೆ. ಆಸ್ಪತ್ರೆಯಲ್ಲಿ ನನ್ನ ಜೊತೆ ನನ್ನ ಮಾಮ ಇದ್ದರು. ಈ ಅಪಘಾತದಲ್ಲಿ ನಿಮಗೆ ಮಾತ್ರ ಪೆಟ್ಟಾಗಿದೆ ಎಂದರೆ ನನಗೆ ಬಹಳ ಪೆಟ್ಟಾಗಿದೆ ನನ್ನ ಮಾಮ ಜಾಫರ್ ಗೆ ಸ್ವಲ್ಪ ಪೆಟ್ಟಾಗಿದೆ ಎನ್ನುತ್ತಾರೆ.

5. ಅಪಘಾತ ಸ್ಥಳದಿಂದ ವಾಸು ಆಸ್ಪತ್ರೆ 3 ಕಿ.ಮೀ ದೂರದಲ್ಲಿದೆ ಎಂದರೆ ಸರಿ. ಅಪಘಾತ ಸ್ಥಳದಿಂದ ಟ್ರಾಫಿಲ್ ಪೊಲೀಸ್ ಠಾಣೆ 5 ಕಿ.ಮೀ ದೂರದಲ್ಲಿದೆ ಎಂದರೆ ಸರಿ.

6. ದೂರನ್ನು ನನ್ನ ಅಣ್ಣ ಕೊಟ್ಟಿದ್ದಾನೆ. ಮೋಟಾರ ಸೈಕಲನ್ನು ನಾನೇ ಓಡಿಸುತ್ತಿದ್ದೆ ಮತ್ತು ನನ್ನ ಹತ್ತಿರ ಲೈಸನ್ಸ ಇಲ್ಲದ್ದರಿಂದ ನನ್ನ ಅಣ್ಣನ ಕಡೆಯಿಂದ ಕೇಸ್ ಸೆಟ್ ಮಾಡಲು 2 ದಿವಸ ತಡ ಆಗಿದೆ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಸೇರಿ ಸುಳ್ಳು ಕೇಸನ್ನು ನಮಗೆ ಅನುಕೂಲವಾಗುವಂತೆ ತಯ್ಯಾರು ಮಾಡಿದ್ದೇವೆ ಎಂದರೆ ಸರಿಯಲ್ಲ.

7. ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿದೆ ಎಂದರೆ ಸರಿ. ಆಟೋ ಮತ್ತು ಮೋಟಾರ ಸೈಕಲ್ ಎದರು ಬದರು ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಗಿದೆ. ಅಪಘಾತ ಸ್ಥಳದಲ್ಲಿ ರಸ್ತೆ ಬಹಳ ಅಗಲ ಇದೆ ಮತ್ತು ನೇರವಾಗಿ ಇದೆ ಎಂದರೆ ಸರಿ.

8. ನನಗೆ ಈಗ ಪೂರ್ಣ ಆರಾಮವಾಗಿದೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಬಿಲ್ ಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

9. ನಾನು ಲೇಬರ್ ಎಂದರು ತೋರಿಸಲು ಲೇಬರ್ ಐಡೆಂಟಿ ಕಾರ್ಡ ಇಲ್ಲ. ವೈದ್ಯರಿಂದ ಸುಳ್ಳು ನ್ಯೂನ್ಯತೆಯ ಪ್ರಮಾಣ ಪತ್ರ ಪಡೆದಿದ್ದೇನೆ ಎಂದರೆ ಸರಿಯಲ್ಲ

ಪಾಟೀ ಸವಾಲು : 2 ನೇ ಎದುರುದಾರ ಪರ ವಕೀಲರು ಸಮಯ ಕೋರುತ್ತಾರೆ. ಸಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪುನ: ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ .

ಓ.ಹೇ.ಕೇ. ಸರಿ ಇದೆ

(ಶ್ರೀ ವಿ.ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು
ಮೋಟಾರ ವಾಹನಗಳ ಅಪಘಾತ ಪರಿಹಾರ ನ್ಯಾಯಾಧೀಶರು, ಬೀದರ.